JUNE 16, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **‘ಜಲ್ ಜೀವನ್ ಮಿ ’ನ್’; ದಾವಣಗೆರೆ ಜಿಲ್ಲೆ, ‘ಹರ್ ಘರ್ ಜಲ್’ ಅನುಷ್ಠಾನದಲ್ಲಿ, ರಾಜ್ಯಕ್ಕೆ ಪ್ರಥಮ.**
- **2030ರ ಒಳಗೆ, 500 ಗಿಗಾ ವ್ಯಾಟ್, ನವೀಕರಿಸಬಹುದಾದ ಇಂಧನ ಉತ್ಪಾದನೆ, ಕೇಂದ್ರದ ಗುರಿ.**
- **‘ಪಾಲಿಸಿದರೆ ಪಾಲು’; ಉತ್ತರಕನ್ನಡ ಜಿಲ್ಲೆ, ಜೊಯಿಡಾ ವನವಾಸಿಗಳಿಗೆ, ಎಲ್.ಪಿ.ಜಿ. ಸಿಲಿಂಡರ್ ವಿತರಣೆ.**
- **11ನೇ ವಿಶ್ವ ಯೋಗ ದಿನಾಚರಣೆ; ರಾಜ್ಯಾದ್ಯಂತ ಯೋಗಪಟುಗಳಿಂದ ವಿಶೇಷ ತಾಲೀಮು.**

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ಪುರಸ್ಕೃತ, ‘ಜಲ್ ಜೀವನ್ ಮಿ ’ನ್ ಯೋಜನೆ’ಯನ್ನು, ರಾಜ್ಯದಲ್ಲಿ ಅನುಷ್ಠಾನಗೊಳಿಸಲು, ವಿಶ್ವ ಬ್ಯಾಂಕ್, 3 ಸಾವಿರ ಕೋಟಿ ರೂಪಾಯಿ ಒದಗಿಸಿದೆ ಎಂದು, ವಿಶ್ವ ಬ್ಯಾಂಕ್ ಕಾರ್ಯಪಡೆ ತಂಡದ ಮುಖ್ಯಸ್ಥ, ಮರಿಯಪ್ಪ ಕುಳ್ಳಪ್ಪ ತಿಳಿಸಿದ್ದಾರೆ. ಜಲ್ ಜೀವನ್ ಮಿಷನ್ ಯೋಜನೆ ಅಡಿ, ರಾಜ್ಯಾದ್ಯಂತ, ವಿವಿಧ ಜಿಲ್ಲೆಗಳಲ್ಲಿ, 32 ಗ್ರಾಮಗಳಲ್ಲಿ, ದಿನದ 24 ಗಂಟೆ, ವಾರದ 7 ದಿನ, ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ದಾವಣಗೆರೆಯಲ್ಲಿ, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ತಲಾ ಎರಡು ಗ್ರಾಮಗಳನ್ನು ದತ್ತು ಪಡೆದು, 13 ಗ್ರಾಮಗಳಲ್ಲಿ ಮಾದರಿಯಾಗಿ ಈ ಯೋಜನೆಯನ್ನು ಅನುಷ್ಠಾನ ಗೊಳಿಸಿರುವುದು, ರಾಜ್ಯದ ಗಮನ ಸೆಳೆದಿದೆ.**

**ಈ ಕುರಿತು, ಒಂದು ವರದಿ.**

*****

***ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಫಲವಾಗಿ, ಜಲ್ ಜೀವನ್ ಮಿಶನ್ ಯೋಜನೆ, ದೇಶದ ಎಲ್ಲ ಗ್ರಾಮಗಳಿಗೂ, ಶುದ್ಧ ಹಾಗೂ ನಿರಂತರ ನೀರು ಪೂರೈಸುವ, ಮಹತ್ವಾಕಾಂಕ್ಷಿ ಯೋಜನೆಯಾಗಿ, ರೂಪುಗೊಂಡಿದೆ.***

*ಕೇಂದ್ರದ ಜಲಶಕ್ತಿ ಸಚಿವಾಲಯ, 'ಹರ್ ಘರ್ ಜಲ್', ಪ್ರತಿ ಮನೆಗೆ ನೀರು ಎಂಬ ಧ್ಯೇಯದೊಂದಿಗೆ, ಜಲ್ ಜೀವನ್ ಮಿಷನ್ ಅನುಷ್ಠಾನಗೊಳಿಸಿದೆ. ಶುದ್ಧ ಕುಡಿಯುವ ನೀರಿನ ಪೂರೈಕೆ ಹಾಗೂ ಜಲ ಮೂಲಗಳ ನೈರ್ಮಲ್ಯ ಕಾಪಾಡುವಿಕೆಗೆ ಆದ್ಯತೆ ನೀಡಲಾಗಿದೆ.*

*'ಜಲ್ ಜೀವನ್ ಮಿಷನ್ ಯೋಜನೆ' ಅಡಿ, ದಾವಣಗೆರೆ ಜಿಲ್ಲೆಯ, 13 ಗ್ರಾಮಗಳು, ಶುದ್ಧ ಹಾಗೂ ಸುರಕ್ಷಿತ ನೀರು ಒದಗಿಸುವ ಮೂಲಕ, ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿವೆ.*

*ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ದಾವಣಗೆರೆ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಸುರೇಶ ಇಟ್ನಾಳ್.*

<><><>

ವಿವೇಕ (40) ಸೆಕೆಂದುಗಳು + ಜಿ.ಪಂ. ಸಿ.ಇ.ಓ. ಸುರೇಶ ಇಟ್ನಾಳ ಧ್ವನಿ (40) ಸೆಕೆಂದುಗಳು

<><><>

ಇಂಧನ ಕ್ಷಮತೆ ಮತ್ತು ಸ್ವಾವಲಂಬನೆ ಗುರಿ ಸಾಧಿಸಲು, ವಿಶ್ವಾಸಾರ್ಹ ಗ್ರಿಡ್‌ಗೆ ಸೌರ ಮತ್ತು ಪವನ ಶಕ್ತಿಯನ್ನು ಸಂಯೋಜಿಸುವುದು ಅಗತ್ಯ; 2030ಕ್ಕೆ, 500 ಗಿಗಾ ವ್ಯಾಟ್ ಸಾಮರ್ಥ್ಯದ, ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಗಳಿಸುವುದು, ತಮ್ಮ ಗುರಿ ಎಂದು, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ, ವಿಶ್ವ ಪವನ ದಿನವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಪಿ.ಎಂ.-ಕುಸುಮ್ ಯೋಜನೆಯನ್ನು, ಕರ್ನಾಟಕ ಸೇರಿದಂತೆ, ಹಲವು ರಾಜ್ಯಗಳು ಸಮರ್ಪಕವಾಗಿ ಬಳಸಿಕೊಳ್ಳುತ್ತಿವೆ ಎಂದರು.

<><><>

ಕೇಂದ್ರ ಇಂಧನ ಸಚಿವಾಲಯದ, ರಾಜ್ಯ ಖಾತೆ ಸಚಿವ ಶ್ರೀಪಾದ್ ಯೇಸ್ಸೋ ನಾಯ್ಕ್ ಮಾತನಾಡಿ, ಪವನ ಶಕ್ತಿ ಉತ್ಪಾದನೆಯಲ್ಲಿ ಭಾರತ, ಸದ್ಯ 51 ಗಿಗಾವ್ಯಾಟ್ ಸಾಮರ್ಥ್ಯ ಹೊಂದಿದ್ದು, ವಿಶ್ವದಲ್ಲೇ 4ನೇ ಅತಿದೊಡ್ಡ ಉತ್ಪಾದನಾ ತಾಣವಾಗಿದೆ. ನವೀಕರಿಸಬಹುದಾದ ಇಂಧನ ಗುರಿ ಸಾಧಿಸಲು, ಸಾಮೂಹಿಕ ಕ್ರಮ ಅವಶ್ಯ ಎಂದರು.

<><><>

2024-25ನೇ ಸಾಲಿನಲ್ಲಿ, ಕರ್ನಾಟಕ, ಪವನ ವಿದ್ಯುತ್ ಕ್ಷೇತ್ರಕ್ಕೆ, ಸಾವಿರದ 331 ದಶಾಂಶ 48 ಮೆಗಾ ವ್ಯಾಟ್ ಸೇರ್ಪಡೆಗೊಳಿಸಿ, ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. "ಪವನ್-ಊರ್ಜಾ; ಪಾವರಿಂಗ್ ದಿ ಫ್ಯೂಚರ್ ಆಫ್ ಇಂಡಿಯಾ" ಸಮಾರಂಭದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಂದ, ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಪ್ರಶಸ್ತಿ ಸ್ವೀಕರಿಸಿದರು.

<><><>

ಉರುವಲಿಗಾಗಿ ಕಾಡಿನ ಮರಮುಟ್ಟು ಬಳಸುವುದನ್ನು ಕಡಿಮೆ ಮಾಡಲು ಹಾಗೂ ಮಹಿಳೆಯರ ಆರೋಗ್ಯದ ಹಿತದೃಷ್ಟಿಯಿಂದ, ಅರಣ್ಯ ಇಲಾಖೆ ಹಾಗೂ ಪರಿಸರ ಅಭಿವೃದ್ಧಿ ಸಮಿತಿ, ಅರ್ಹ ಫಲಾನುಭವಿಗಳಿಗೆ ಗ್ಯಾಸ್ ಸಿಲಿಂಡರ್ ವಿತರಿಸಿದೆ ಎಂದು, ಉತ್ತರಕನ್ನಡ ಜಿಲ್ಲೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಎಸ್. ಎಸ್. ಕಳ್ಳಿಮಠ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಜೊಯಿಡಾ ತಾಲೂಕು, ಅವುರ್ಲಿಯಲ್ಲಿ, ಪಾಲಿಸಿದರೆ ಪಾಲು ಅನ್ವಯ, ಅರ್ಹ ಫಲಾನುಭವಿಗಳಿಗೆ, ಅರಣ್ಯ ಇಲಾಖೆ ವತಿಯಿಂದ, ಗ್ಯಾಸ್

ಸಿಲಿಂಡರ್ ವಿತರಿಸಿ, ಅವರು ಮಾತನಾಡಿದರು. ಅರಣ್ಯ ಇಲಾಖೆಯ, ಶಿರಸಿಯ ಕೆನರಾ ವೃತ್ತ, ದಾಂಡೇಲಿಯ ಕಾಳಿ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಪಣಸೋಲಿ ವನ್ಯ ಜೀವಿ ವಲಯದ ಸಹಯೋಗದಲ್ಲಿ, ಗ್ರಾಮ ಪಂಚಾಯತ ಸದಸ್ಯ ಧವಳೋ ಗಣೇಶ ಸಾವರ್ಕರ್, ಫಲಾನುಭವಿಗಳನ್ನು ಅಭಿನಂದಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಕೇಂದ್ರದ ಆಯುಷ್ ಸಚಿವಾಲಯ, ಇದೇ 21 ರಂದು ದೇಶಾದ್ಯಂತ ಆಯೋಜಿಸಿದ, 11ನೇ ವಿಶ್ವ ಯೋಗ ದಿನಾಚರಣೆ ಹಿನ್ನೆಲೆ, ರಾಜ್ಯಾದ್ಯಂತ ವಿವಿಧ ಜಿಲ್ಲಾಡಳಿತಗಳು, ವಿಶೇಷ ಸಿದ್ಧತೆ ಆರಂಭಿಸಿವೆ.

<><><>

ಮೈಸೂರಿನ ಅರಮನೆ ಆವರಣದಲ್ಲಿ, ಯೋಗ ದಿನಾಚರಣೆ ಪ್ರಯುಕ್ತ, ನೂರಾರು ಯೋಗಪಟುಗಳು ಪಾಲ್ಗೊಂಡು, ಪೂರ್ವಭಾವಿ ತಾಲೀಮು ನಡೆಸಿದರು.

<><><>

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲದಲ್ಲಿ, ಕಳೆದ 33 ವರ್ಷಗಳಿಂದ, ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯಲ್ಲಿ, ಯೋಗಾಭ್ಯಾಸವನ್ನು, ಆಸಕ್ತ ಸಾರ್ವಜನಿಕರಿಗೆ ಉಚಿತವಾಗಿ ಹೇಳಿಕೊಡಲಾಗುತ್ತಿದೆ.

<><><>

ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ, ಎರಡು ದಿನಗಳ ಕಾಲ ಬೀಜಗಳ ಪ್ರದರ್ಶನ, ಮಾರಾಟ ಹಾಗೂ ಬೀಜ ಸಂರಕ್ಷಕರ ಮಿಲನದ, ದೇಸಿ ಬೀಜೋತ್ಸವ, ಯಶಸ್ವಿಯಾಗಿ ಸಂಪನ್ನಗೊಂಡಿತು. ವಿವಿಧ ಸಂಸ್ಥೆಗಳ ಸಹಯೋಗದಲ್ಲಿ, ಶನಿವಾರ ಮತ್ತು ಭಾನುವಾರ ಜರುಗಿದ ದೇಸಿ ಬೀಜೋತ್ಸವದಲ್ಲಿ, ರೈತರ ಮಧ್ಯೆ ಬೀಜ ವಿನಿಮಯ, ಬೀಜ ಸಂರಕ್ಷಕರು ಹಾಗೂ ರೈತ ವಿಜ್ಞಾನಿಗಳಿಂದ ಅನುಭವ ಹಂಚಿಕೆ, ಕೃಷಿ ತಜ್ಞರಿಂದ ಮಾಹಿತಿ ಹಾಗೂ ಬೀಜ ಬ್ಯಾಂಕ್ ಸದಸ್ಯರ ಜೊತೆ ಮಾತುಕತೆ ಜರುಗಿದವು.

<><><>

ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ವಿಶ್ರಾಂತ ಉಪ ಕುಲಪತಿ, ರಾಜೇಂದ್ರ ಪ್ರಸಾದ.

<><><>

ರಾಜೇಂದ್ರ ಪ್ರಸಾದ ಧ್ವನಿ 45 ಸೆಕೆಂದುಗಳು

<><><>

ದಕ್ಷಿಣಕನ್ನಡ ಜಿಲ್ಲೆಯಾದ್ಯಂತ, ಭಾರೀ ಮಳೆಯಾಗುತ್ತಿದೆ. ನದಿಗಳು ಮೈದುಂಬಿ ಹರಿಯುತ್ತಿವೆ. ಮಂಗಳೂರಿನ ಪಂಪ್ ವೆಲ್, ಕೊಟ್ಟಾರ, ಪಡೀಲ್ ಸೇರಿದಂತೆ, ಅನೇಕ ಪ್ರದೇಶಗಳು ಜಲಾವೃತಗೊಂಡಿವೆ. ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಭೇಟಿ ನೀಡಿ, ಪರಿಶೀಲಿಸಿದರು.

<><><>

ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ, ದಕ್ಷಿಣಕನ್ನಡ ಜಿಲ್ಲೆ ಉಸ್ತುವಾರಿ ಸಚಿವ ದಿನೇಶ ಗುಂಡೂರಾವ, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲೂಕಿನ, ನೆಮ್ಮಾರು ಬಳಿ, ರಾಷ್ಟ್ರೀಯ ಹೆದ್ದಾರಿ 169 ರಲ್ಲಿ ಭೂ ಕುಸಿತ ಸಂಭವಿಸಿದೆ. ಶೃಂಗೇರಿ – ಮಂಗಳೂರು ರಸ್ತೆ ಸಂಪರ್ಕ ಕಡಿತಗೊಂಡಿದೆ. ತೆರವು ಕಾರ್ಯಾಚರಣೆ, ಮಳೆಯಲ್ಲಿಯೇ ಮುಂದುವರೆದಿದೆ.

<><><>

ಉತ್ತರಕನ್ನಡ ಜಿಲ್ಲೆ, ಕುಮಟಾ ತಾಲೂಕಿನಾದ್ಯಂತ ನಿರಂತರ ಮಳೆಯಾಗುತ್ತಿದೆ. ಕುಮಟಾ – ಶಿರಸಿ ಹೆದ್ದಾರಿಯ, ದೇವಿ ಮನೆ ಘಟ್ಟದಲ್ಲಿ ಗುಡ್ಡ ಕುಸಿತ ಉಂಟಾಗಿದ್ದು, ವಾಹನ ಸಂಚಾರ ನಿಷೇಧಿಸಲಾಗಿದೆ.

<><><>

ಗಾನಯೋಗಿ ಶ್ರೀ ಪಂಚಾಕ್ಷರಿ ಗವಾಯಿಗಳ, 81ನೇ ಹಾಗೂ ಶ್ರೀ ಪುಟ್ಟರಾಜ ಕವಿ ಗವಾಯಿಗಳ, 15ನೇ ಪುಣ್ಯ ಸ್ಮರಣೋತ್ಸವ, ಇಂದು ಸಂಜೆ 6 ಗಂಟೆಗೆ, ಗದಗ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಜರುಗಲಿದೆ.

<><><>

ಪಂಡಿತ್ ಪುಟ್ಟರಾಜ ಪ್ರಶಸ್ತಿಯನ್ನು, ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲೂಕು, ಬಿಳೇಕಲ್ಲ ಗ್ರಾಮದ ಸಂಗೀತಜ್ಞ ರಾಮಣ್ಣ ನಸಬಿ ಅವರಿಗೆ, ಪ್ರದಾನ ಮಾಡಲಾಗುತ್ತಿದೆ.

<><><>

ಕುಮಾರ ಶ್ರೀ ಪ್ರಶಸ್ತಿಯನ್ನು, ಜಿಗಳೂರಿನ ಪ್ರವಚನಕಾರ, ವಿರೂಪಾಕ್ಷಯ್ಯಶಾಸ್ತ್ರಿ ಹಿರೇಮಠ, ಬೆಂಗಳೂರಿನ ಗಾಯಕ ರಾಜು ಎಮ್ಮಿಗನೂರ ಹಾಗೂ ಭೂ ದಾನಿ ಗದುಗಿನ ಪ್ರಕಾಶ ಬಸರಿಗಿಡದ ಅವರಿಗೆ, ಗಣ್ಯರು ಪ್ರದಾನಿಸಿ, ಗೌರವಿಸಲಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ದಾವಣಗೆರೆಗೆ ಭೇಟಿ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಹಾಗೂ ತೋಟಗಾರಿಕೆ ಖಾತೆ ಸಚಿವ, ಎಸ್.ಎಸ್. ಮಲ್ಲಿಕಾರ್ಜುನ ಮಾಹಿತಿ ನೀಡಿ, ಮುಖ್ಯಮಂತ್ರಿಯವರು, ಸಾವಿರದ 350 ಕೋಟಿ ರೂಪಾಯಿ ಮೊತ್ತದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಚಾಲನೆ ನೀಡಲಿದ್ದಾರೆ; ಸರ್ಕಾರದ ವಿವಿಧ ಯೋಜನೆಗಳಡಿ ಫಲಾನುಭವಿಯಾಗಿ ಆಯ್ಕೆಯಾದವರಿಗೆ, ಸವಲತ್ತುಗಳನ್ನು ವಿತರಿಸಲಿದ್ದಾರೆ ಎಂದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೇರಿದಂತೆ, ಸಚಿವ ಸಂಪುಟದ ಹಿರಿಯ ಸಚಿವರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದಿನಿಂದ ಜುಲೈ 31ರ ವರೆಗೆ, ಆರೋಗ್ಯ ಇಲಾಖೆ, 'ತೀವ್ರ ಅತಿಸಾರದಿಂದ, ಮಕ್ಕಳ ಮರಣವನ್ನು ಶೂನ್ಯಕ್ಕೆ ತರುವ' ಗುರಿಯೊಂದಿಗೆ, 'ಅತಿಸಾರ ನಿಲ್ಲಿಸಿ ಅಭಿಯಾನ'ವನ್ನು, ರಾಜ್ಯಾದ್ಯಂತ ಆಯೋಜಿಸಲಿದೆ.

<><><>

ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನಾ ಯೋಜನೆ ಅಡಿ,ಧಾರವಾಡದ ಕುಮಾರೇಶ್ವರ ನಗರದ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಯ್ಕೆಯಾಗಿದ್ದು, ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕ್ ತಂಡ, ಇಂದು ಬೆಳಗ್ಗೆ 10 ಗಂಟೆಗೆ ಭೇಟಿ ನೀಡಲಿದೆ.

<><><>

ಹುಬ್ಬಳ್ಳಿ, ಧಾರವಾಡ ಮಧ್ಯೆ, ಇಲೆಕ್ಟ್ರಿಕ್ ರ‍್ಯಾಪಿಡ್ ಟ್ರಾನ್ಸಿಟ್ ವ್ಯವಸ್ಥೆ ಜಾರಿ ಗೊಳಿಸುವ ಬಗ್ಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರ ಅಧ್ಯಕ್ಷತೆಯಲ್ಲಿ, ಸಾರ್ವಜನಿಕರೊಂದಿಗೆ ಸಮಾಲೋಚನಾ ಸಭೆ, ಇಂದು ಮಧ್ಯಾಹ್ನ 3 ಗಂಟೆಗೆ, ಸೃಜನಾ ರಂಗಮಂದಿರದಲ್ಲಿ ಜರುಗಲಿದೆ.

<><><>

ಗದಗ, ಬಿ.ಡಿ. ತಟ್ಟಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಸಂಚಾಲಿತ, 'ಏಕ್ ಪ್ರಯಾಸ್' ವಿಶೇ ' ಮಕ್ಕಳ ಕಲಿಕಾ ಕೇಂದ್ರದಲ್ಲಿ, ಜಿಮ್ಸ್ ಆಸ್ಪತ್ರೆ ಮನೋ ಆರೋಗ್ಯ ತಜ್ಞ ಡಾಕ್ಟರ್ ಸೋಮಶೇಖರ ಬಿಜ್ಜಳ, ಮಕ್ಕಳೊಂದಿಗೆ ಸಸಿ ನೆಟ್ಟರು.

<><><>

ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಗಾಂಧಿ ಭವನದಲ್ಲಿ ಆಯೋಜಿಸಿದ್ದ, ವಿಶ್ವವಿದ್ಯಾಲಯದ ಮಟ್ಟದ ಏಳು ದಿನಗಳ, ನಾಯಕತ್ವ ಶಿಬಿರ ಸಮಾರೋಪಗೊಂಡಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಜಲ್ ಜೀವನ್ ಮಿ ’ನ್'; ದಾವಣಗೆರೆ ಜಿಲ್ಲೆ, 'ಹರ್ ಘರ್ ಜಲ್' ಅನುಷ್ಠಾನದಲ್ಲಿ, ರಾಜ್ಯಕ್ಕೆ ಪ್ರಥಮ.
- 2030ರ ಒಳಗೆ, 500 ಗಿಗಾ ವ್ಯಾಟ್, ನವೀಕರಿಸಬಹುದಾದ ಇಂಧನ ಉತ್ಪಾದನೆ, ಕೇಂದ್ರದ ಗುರಿ.
- 'ಪಾಲಿಸಿದರೆ ಪಾಲು'; ಉತ್ತರಕನ್ನಡ ಜಿಲ್ಲೆ, ಜೊಯಿಡಾ ವನವಾಸಿಗಳಿಗೆ, ಎಲ್.ಪಿ.ಜಿ. ಸಿಲಿಂಡರ್ ವಿತರಣೆ.
- 11ನೇ ವಿಶ್ವ ಯೋಗ ದಿನಾಚರಣೆ; ರಾಜ್ಯಾದ್ಯಂತ ಯೋಗಪಟುಗಳಿಂದ ವಿಶೇಷ ತಾಲೀಮು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.